ಕಛೇರಿಗೆ ಬಂದವನೇ ಡೇವಿಡ್ ತನ್ನ ಕಾಯಂ ಸೀಟಿನಲ್ಲಿ ಕುಳಿತ, ಅವನನ್ನು ನೋಡಿದ ತಕ್ಷಣ ವೈಟರ್ ಧಾವಿಸಿ ಬಂದು ನಕ್ಕು, "ಈಗ ಕಾಫಿ ತಾನೇ?" ಎಂದು ಕೇಳಿದಳು. "ಹೌದು" ಎಂದವನೇ ತನ್ನ ಲ್ಯಾಪ್‌ಟಾಪನ್ನು ಚೀಲದಿಂದ ತೆಗೆದು ಮೇಜಿನ ಮೇಲಿರಿಸಿ ಆನ್ ಮಾಡಿದ. ಬಂದ ಕಾಫಿಯನ್ನು ಆಗೊಮ್ಮೆ ಈಗೊಮ್ಮೆ ಒಂದೊಂದೇ ಗುಟುಕಾಗಿ ಕುಡಿಯುತ್ತಾ ತಾನು ಬರೆಯಲೆತ್ನಿಸುತ್ತಿದ್ದ ಕಥೆಯನ್ನು ತೆರೆದ. ಬರೆಯಲಾಗಿದ್ದು ಎರಡು ಪ್ಯಾರಾ ಮಾತ್ರ. ಓದಿದ. ಅದಕ್ಕಿಂತ ಕೆಟ್ಟದಾಗಿ ಬರೆಯುವುದು ಕಷ್ಟ ಎನಿಸಿತು. ಬರೆದಿದ್ದನ್ನು ಡಿಲೀಟ್ ಮಾಡಿದ. ಖಾಲಿ ಪುಟ ತನ್ನ ಮುಂದೆ! ಡೇವಿಡ್ ಮಧ್ಯಾಹ್ನ ಐದು, ಆರರವರೆಗೆ ಅಲ್ಲಿಯೇ ಕೂತಿರುತ್ತಿದ್ದ, ಕಾರಣ – ಬರೆಯಬೇಕು.

ಡೇವಿಡನಿಗೆ ದೊಡ್ಡ ಬರಹಗಾರನಾಗುವ ಹಂಬಲ. ಸ್ಥಳೀಯ ಕಾಲೇಜಿನಲ್ಲಿ ಕ್ರಿಯೇಟಿವ್ ರೈಟಿಂಗ್‌ನಲ್ಲಿ ಪದವೀಧರ. ಪ್ರಚಂಡ ವಿದ್ಯಾರ್ಥಿ ಎಂಬ ಹೆಸರು ಬೇರೆ. ತರಗತಿಗೆ ಮೊದಲಿಗನೂ ಹೌದು. ಶಾಲಾ ದಿನಗಳಲ್ಲಿಯೇ ಓದುತ್ತಿದ್ದ, ಬರೆಯುತ್ತಿದ್ದ. ಡಿಕೆನ್ಸ್, ಶೇಕ್ಸ್‌ಪಿಯರ್ ಮುಂತಾದವರಲ್ಲದೇ ಕಮ್ಯೂ, ಸಾರ್ತ್ರ್‌ಗಳನ್ನೂ ಓದಿ ಅರಗಿಸಿಕೊಂಡಿದ್ದ. ಬರೆದರೆ ಕಮ್ಯೂ ತರಹ ಬರೆಯಬೇಕು, ಅವನ 'ಔಟ್ ಸೈಡರ್'ಗೆ ಸಮವಾಗಿ ನಿಲ್ಲುವ ಮತ್ತೊಂದು ಕಾದಂಬರಿ ಇಲ್ಲ ಎಂದು ಗೆಳೆಯರಿಗೆ ಹೇಳುತ್ತಿದ್ದ. ಕಾಲೇಜಿನಲ್ಲಂತೂ ಬರೆದದ್ದೇ ಬರೆದದ್ದು. ಸಮಾಜದಲ್ಲಿನ ಶೋಷಣೆ, ಮಾನವ ಪ್ರೇಮ, ಕಾಮ ಎಲ್ಲವೂ ಇವನ ವಸ್ತುಗಳಾದವು. ಬರಹದಲ್ಲಿ ಹರಿತವಿದೆ, ಸುತ್ತಲಿನ ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸಬಲ್ಲ ಎಂದೆಲ್ಲಾ ಅವನನ್ನು ಹೊಗಳಲಾಯಿತು. "ನೀನೊಬ್ಬ ದೊಡ್ಡ ಲೇಖಕನಾಗುತ್ತೀಯ" ಎಂದು ಪ್ರೊಫೆಸರ್ ಭವಿಷ್ಯ ನುಡಿದಿದ್ದರು.

ಪದವಿ ಪಡೆದ ನಂತರ ವೃತ್ತಪತ್ರಿಕೆಗಳು ಮತ್ತು ಪುಸ್ತಕ ಪ್ರಕಾಶಕರ ಉಪಸಂಪಾದಕನಾಗಿ ಕೆಲಸ ಮಾಡಿದ. ಉದಯೋನ್ಮುಖ ಲೇಖಕರು ಕಳುಹಿಸಿದ ಲೇಖನಗಳನ್ನು ಓದಿ ಅವುಗಳ ಮೌಲ್ಯ ಮಾಪನ ಮಾಡುವುದು ಒಂದು ಶಿಕ್ಷೆಯೇ ಆಗಿತ್ತು.

ಅವನನ್ನು ಸದಾ ಗಮನಿಸುತ್ತಿದ್ದ ಸೈಕಾಲಜಿ ವಿದ್ಯಾರ್ಥಿನಿ ಸೇರಾ ಅವನಿಗೆ ಮಾರುಹೋಗಿದ್ದಳು. ಪ್ರೇಮ ಅಂಕುರಿಸಿತು, ಮದುವೆಯಾದರು. ಡೇವಿಡ್ ಮಧ್ಯಮ ವರ್ಗದ ಗುಮಾಸ್ತ ಕುಟುಂಬದವ. ಸೇರಾ ಆಗರ್ಭ ಶ್ರೀಮಂತಳು. ಅವಳ ತಂದೆ ನೀಡಿದ ಮದುವೆಯುಡುಗೊರೆ ಎಂದರೆ ದೊಡ್ಡ ಮನೆ. ಅವರಿಬ್ಬರು ಅಲ್ಲಿಯೇ ಸಂಸಾರ ಹೂಡಿದರು. ಮನೆಗೆ ಬೇಕಾದ ಎಲ್ಲಾ ಬಗೆಯ ಸಲಕರಣೆಗಳೂ ಅವರಿಗೆ ತಂದೆಯಿಂದ ಲಭಿಸಿತು. ಒಂದು ಕಾರು ಕೂಡ. ಸಾಲದೆಂಬಂತೆ ಅವಳ ತಂದೆ ಅವಳನ್ನು ತನ್ನ ಉದ್ದಿಮೆಯೊಂದರ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಿಸಿದ. ಹೀಗಾಗಿ ಮತ್ತೊಂದು ಕಾರು ನವ ದಂಪತಿಗೆ ದೊರೆಯಿತು. ಅಲ್ಲದೆ ಖರ್ಚಿಗೆ ಯಥೇಚ್ಛ ಹಣ. ಅವಳು ಓದಿದ್ದು ಮೋಜಿಗಾಗಿ, ಕೆಲಸ ಮಾಡುವ ಹಂಬಲ ಕಿಂಚಿತ್ತೂ ಇರಲಿಲ್ಲ. ಯಾರಿಗೆ ಬೇಕು ಕೆಲಸ? ಡೇವಿಡನಿಗೂ ತನ್ನ ಉಪಸಂಪಾದಕತನದಿಂದ ಬಿಡುಗಡೆ ಸಿಕ್ಕಿತು. ಈಗ ಕೆಲಸ ಮಾಡದೇ ಹೋದರೂ ಏನಕ್ಕೂ ಕೊರತೆಯಿಲ್ಲ.

ಬೆಳಿಗ್ಗೆ ಸೇರಾ ತನ್ನ ಕಚೇರಿಗೆ ಹೋಗಿ ಸಂಜೆ ಬರುತ್ತಿದ್ದಳು. ಡೇವಿಡನಿಗೆ ಪೂರ್ಣ ಸ್ವಾತಂತ್ರ



ಗುರು ನಾವಳ್ಳಿ